ಶ್ರೀ ಎಸ್. ಪೈ. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸವನ್ನು ನೆಷರ್ ಲೋನ್ ತೆಗೆದುಕೊಂಡಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಎಂದು ಇದು ತಮಗೆ ಗೊತ್ತಿದೆಯೇ?

(ಉತ್ತರವಿಲ್ಲ).

ಶ್ರೀ ಎಂ.ಬಿ. ರಾಮಸ್ವಾಮಿ.—ಇರತಕ್ಕಂಥ ರೋಡ್ ವರ್ಕ್ಸ್‌ಗಳು ಏನು ಇವೆ ಅದಕ್ಕೆ ಏನು, ಈ ಸಾಯಿರ್ ಕನ್ಸರ್‌ವೇಷನ್‌ನಲ್ಲಿ ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡದೆ ಹಾಗೆಯೇ ಉಳಿದು ಹೋಗಿದೆ ಕೆಲವು ಕೆಲಸಗಳು ಹಣವಿಲ್ಲದೆ ನಿಂತುಹೋಗಿರುವ ಕಡೆ ಇವನ್ನು ರೀ ಅಪ್ರೋಪ್ರಿಯೇಟ್ ಮಾಡಿ ಏತಕ್ಕೆ ಕೊಡಬಾರದು? ಇದು ಕೂಡ ರೈತರಮೇಲೆ ಬರುವ ಹಣ?

ಶ್ರೀ ಕೆ.ಎಚ್. ಪಾಟೀಲ್.—ಸಾಯಿರ್ ಕನ್‌ಸರ್‌ವೇಷನ್ ಬೇರೆ. ಇದು ಕೂಡ ರೈತನ ಮೇಲೆ ಸಾಲದ ರೂಪದಲ್ಲಿ ಹೋಗುತ್ತದೆ, ಈಗಾಗಲೇ 4.95 ಲಕ್ಷ ರೂಪಾಯಿ ರಿಲೀಸ್ ಮಾಡಿದ್ದೇವೆ. ಆದ್ದರಿಂದ ಇದಕ್ಕೆ ಹಣದ ಕೊರತೆಯ ಪ್ರಶ್ನೆಯಿಲ್ಲ.

ಶ್ರೀ ಬಿ, ಭೈರಪ್ಪಾಜಿ.—ಕೆಲವು ಕಡೆ ನಿಲ್ಲಿಸಬೇಕೆಂದು ಆದೇಶಕೊಟ್ಟಿದೆಯೆಂದು ತಿಳಿದು ಬಂದಿದೆ, ಅದನ್ನು 30ನೇ ತಾರೀಖಿನವರೆಗೆ ಮುಂದುವರಿಸಲು ಸರ್ಕಾರ ಪುನಃ ಆದೇಶ ಕೊಟ್ಟಿದೆಯೆಂದು ಗೊತ್ತಾಗಿದೆ. ಆದ್ದರಿಂದ ಕನಿಷ್ಟ ಡಿಸೆಂಬರ್‌ವರೆಗಾದರೂ ಕೂಲಿ ಒದಗಿಸಿಕೊಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ ಇತ್ತೀಚೆಗೆ ಮಳೆ ಇಲ್ಲದೆ ಬಂದ ಪೈರು ಕೂಡ ಒಣಗಿ ಹೋಗುತ್ತಿದೆ. ಆದ್ದರಿಂದ ಡಿಸೆಂಬರ್‌ವರೆಗೆ ಕೂಲಿ ಒದಗಿಸಲಿಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ನಾನು ಈಗಾಗಲೇ ಹೇಳಿದೆ ಎಲ್ಲಿ ಸ್ಕೀರ್‌ಸಿಟಿ ಮುಂದು ವರಿಯುತ್ತದೆ ಅಲ್ಲಿಯವರೆಗೆ ಕಾಮಗಾರಿ ಕೆಲಸಗಳನ್ನು ನಡೆಸುತ್ತೇವೆ. ಇದರಿಂದ ಜನರಿಗೆ ಯಾವ ರೀತಿಯಿಂದಲೂ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಆದರೆ ಸ್ಕೀರ್‌ಸಿಟಿಯಿಲ್ಲದೆ ಇರುವ ಕಡೆಯೂ ಡಿಸೆಂಬರ್‌ವರೆಗೆ ಇದನ್ನು ಮುಂದುವರಿಸುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ.

The affairs of VISL Bhadravathi

171. SRI B. BHYRAPPAJI (Thuruvekere).—Will the Chief Minister be pleased to state.—

(*a*) the articles manufactured in the Visveswaraiah Iron and Steel Factory Bhadravathi;

(*b*) the quantity of varieties of articles manufactured during 1973-74, 1974-75, 1975-76 and their value;

(*c*) the quantity of varieties of articles sold during 1973-74, 1974-75 and 1975-76;

(*d*) the quantity of varieties of articles remaining unsold so far and their value;

(*e*) the reasons for the articles remaining unsold in the Company;

(*f*) whether it has not come to the notice of the Government that due to this the future of the company is affected;

(*g*) if so, the steps taken to rectify the same?

SRI D. DEVARAJ URS (Chief Minister).—

(*a*) Details are placed on the Table of the House *Vide* Annexure 'A' **

(*b*) Details are placed on the Table of the House. *Vide* Annexure 'B'**

(*c*) Details are placed on the Table of the House. *Vide* Annexure 'C'**

(*d*) Details are placed on the Table of the House *Vide* Annexure 'D'**

(*e*) Except special steel, mild steel and ferrosilicon the remaining articles are sold on the respective orders placed. These three articles are being sold after orders are received. But the sale of these articles is not satisfactory since July 1974 due to imposition of restrictions by the Reserve Bank of India regarding lending policy. Due to above restrictions most of the industries specially motor and technical industries are restricting their stock to a minimum limit. This has affected the sale of our products. In addition, Bihar Alloys and other mini factories have changed their production of mild steel to that of carbon steel. On account of this, these articles are available in plenty in the Markets.

Hence there is a staff competition for our products.

(*f*) The downward trend in the rates of mild steel is universal The other steel factories are also facing these problems.

The VISL is producing alloy and the mild steel is one of them.

The downward trend in the rates of mild steel alone need not work against the progress of the Karkhane.

(*g*) The factory has diversified the production and in addition has concentrated on the production of minute and valuable articles.

ಶ್ರೀ ಬಿ. ಬೈರಪ್ಪಾಜಿ.—ತಾವು ಕೊಟ್ಟಿರತಕ್ಕಂಥ ತಃಖ್ತೆಯಲ್ಲಿ ನೋಡಿದರೆ ವ್ಯಾಪಾರವಾಗದೆ ನಿಂತುಹೋಗಿರುವ ಸುಮಾರು ಲಕ್ಷೆಗಟ್ಟಲೆ ಪಿಗ್ ಐರನ್, ಆಲಾಯ್ ಸ್ಟೀರ್ ಸ್ಪೆಷರ್ ಸ್ಟೀರ್ ಈ ರೀತಿ ನಾನಾ ಸ್ಟೀರ್ ಪ್ರಾಡಕ್ಟ್ಸ್‌ಗಳು ಉಳಿದಿವೆಯೆಂದು ಗೊತ್ತಾಗುತ್ತದೆ, ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ನಿಂತುಹೋಗಲು ಕಾರಣವೇನು? ಯಾವ ಪದಾರ್ಥ ವ್ಯಾಪಾರ ಆಗುತ್ತದೆಯೆಂದು ನೋಡಿಕೊಂಡು ಕಂಪನಿ ಅದಳಿತಗಾರರು ಪದಾರ್ಥಗಳನ್ನ ತಯಾರು ಮಾಡಿದ್ದರೆ ಕಂಪನಿ ಹಿತಕ್ಕೆ ಇಷ್ಟು ಧಕ್ಕೆ ಆಗುತ್ತಾ ಇರಲಿಲ್ಲ. ಮಾರಾಟವಾಗದೆ ಇರತಕ್ಕಂಥ ಪದಾರ್ಥವನ್ನು ತಯಾರುಮಾಡಿ ಹಣ ಇಲ್ಲದೆ ತೊಂದರೆಪಡುತ್ತಿದ್ದಾರೆ. ಇದಕ್ಕೆ ಕಾರಣಕರ್ತರು ಯಾರು ? ಅದನ್ನು ತಿಳಿಸುತ್ತೀರಾ ಸ್ವಾಮಿ ?

**Copies placed in the Karnataka Legislature Library *vide* No. 47, dated 20th July 1977.

† **ಶ್ರೀ ಡಿ. ದೇವರಾಜ್ ಅರಸ್.**—ಇದಕ್ಕೆ ಮೊದಲನೇ ಕಾರಣಕರ್ತರು **ಎಂದರೆ ನಮ್ಮ ದೇಶದಲ್ಲಿ ಅನೇಕ ಉದ್ಯಮಗಳು ಇವೆ**, ಇಂಡಸ್ಟ್ರೀಸ್‌ಗಳು ಇವೆ ನಾನಾತರಹದ **ಇಂಡಸ್ಟ್ರೀಸ್ ಗಳು ಇವೆ. ಆದ್ದರಿಂದ ಕೆಲವು** ಸಂದರ್ಭಗಳಲ್ಲಿ ರಿಸಿಷನ್ ಆಗುತ್ತದೆಯೆಂದು ಕೇಳಿದ್ದೇವೆ. ಇಡೀ ದೇಶದಲ್ಲಿ ಮಾರುಕಟ್ಟೆಗಳಲ್ಲಿ ಪದಾರ್ಥಗಳ ಬೆಲೆಗಳು ಇಳಿದು ಹೋಗುವಂತಹ **ಸಂದರ್ಭಗಳು** ಉಂಟು. **ಜೊತೆಗೆ** ಉಪಯೋಗ ಮಾಡತಕ್ಕಂಥಹ ಬಳಕೆದಾರರು ಪದಾರ್ಥಗಳನ್ನು ಬಳಕೆ ಮಾಡುವುದನ್ನು **ಕಡಿಮೆ** ಮಾಡಬಹುದು. **ಇಲ್ಲಿ** ಕೊಟ್ಟಿರುವ ಸಾಮಾನುಗಳನ್ನು ಇಂಜಿನಿಯರಿಂಗ್ **ವರ್ಕ್ಸ್‌ಗೆ** ಉಪಯೋಗ ಮಾಡುತ್ತಾರೆ. ಇಂಜಿನಿಯರಿಂಗ್ ವರ್ಕ್ಸ್‌ಗೆ ಸಂಬಂಧಪಟ್ಟಂತೆ ರಿಸಿಷನ್ ಆದರೆ ಅದು **ಯಾರೂ** ಕೇಳತಕ್ಕಂಥಾದ್ದಲ್ಲ. ಆದ್ದರಿಂದ ಪದಾರ್ಥಗಳನ್ನು ಕಾರ್ಖಾನೆಗಳು ತಯಾರುಮಾಡುವಾಗ ಮುಂದೆ ಈ ರೀತಿ ಬೆಲೆ ಮತ್ತು **ಅವಶ್ಯಕತೆ** ಇರುತ್ತದೆಂದು ಪ್ರೋಗ್ರಾಂ ಮಾಡಿ ತಯಾರುಮಾಡುತ್ತಾರೆ **ಆದರೆ ಮಾರ್ಕೆಟ್‌ನಲ್ಲಿ** ಬೆಲೆಗಳು ಒಂದೇ ರೀತಿ ಖಚಿತವಾಗಿ ಇರುತ್ತದೆ ಎಂದು ಲೆಕ್ಕಾಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಮಧ್ಯೆ ಮಧ್ಯೆ **ಅನೇಕ ರಿಸಿಷನ್‌ಗಳಾಗುತ್ತವೆ.** ಇದನ್ನು **ಯಾರೂ** ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ನಷ್ಟಕ್ಕೆ ಯಾರು ಯಾರು ಕಾರಣರು ಎಂದು ಹೇಳುವುದಕ್ಕೆ **ಆಗು**ವುದಿಲ್ಲ, **ಯಾರ** ಮೇಲೂ ತಪ್ಪು ಹೊರಿಸಲಿಕ್ಕೆ ಸಾಧ್ಯವಿಲ್ಲ. **ಕೆಲವು** ಸಂದರ್ಭಗಳಲ್ಲಿ ಸಾಕಷ್ಟು ಹಣ ಒದಗಿಸುವುದಿಲ್ಲ.

ಈ ರಿಸಿಷನ್‌ನಲ್ಲಿ ಇದನ್ನು ಕೇಳುವವರು ಇರುವುದಿಲ್ಲ. ಒಂದೊಂದು ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ ಸ್ಟೀಲ್‌ಬೆಲೆ ವಿಪರೀತ ಏರಿ ಹೋಗಿಬಿಡುತ್ತದೆ. ಆದ್ದರಿಂದ ಮಾರಾಟ ಬೇಗ ಬೇಗ ಆಗುತ್ತದೆ. ಇನ್ನೊಂದು **ನಲ** ಸ್ಟೀಲ್ ಬೆಲೆ ಬಿದ್ದು ಹೋಗುತ್ತದೆ, ಮಾರಾಟವಾಗುವುದಿಲ್ಲ ಫೆರೋ ಮೆರೊಬ್ಡಿನ್ ಎಂಬ ಹೊಸವಸ್ತುವನ್ನು ನಾವು ತಯಾರು ಮಾಡುತ್ತಿದ್ದೇವೆ. ಇದರ **ರಾ** ಮೆಟೀರಿಯಲ್ಸ್ ಸಿಕ್ಕಲಲ್ಲ ಎಂದರೆ **ಇದನ್ನು** ಹೆಚ್ಚಾಗಿ ತಯಾರು ಮಾಡಲಿಕ್ಕಾಗುವುದಿಲ್ಲ. ಇತ್ತೀಚೆಗೆ ಸ್ಟೀಲ್ ಪ್ಯಾನುಫ್ಯಾಕ್ಚರ್ ಮಾಡತಕ್ಕ ಕೆಲವು **ಇಂಡಸ್ಟ್ರೀಸ್‌ಗಳು** ಹುಟ್ಟಿಕೊಂಡಿವೆ. ಪ್ರೈವೇಟ್ ಸೆಕ್ಟಾರ್‌ನಲ್ಲಿ ಸ್ಪೆಷಲ್ ಸ್ಟೀಲನ್ನು ಮ್ಯಾನುಫ್ಯಾಕ್ಚರ್ ಮಾಡುವವರು ಇದ್ದು ಇವರಿಂದ ಕಾಂಪಿಟಿಷನ್ ಕೂಡ ಆಗುತ್ತಿದೆ. There are several reasons why this market will not be conducive everytime every year. ಇತ್ತೀಚೆಗೆ ತಮಗೆ ಉತ್ತರ ಕೊಟ್ಟಿರುವುದು ಆ ಮೇಲೆ 1976ನೇ ಇಸವಿಯಲ್ಲಿ **ಇದ್ದ** ಪೊಸಿಷನ್ **ಅನ್ನು** ನಾನು ತಮಗೆ ಹೇಳಿದ್ದೇನೆ. 1977ನೇ ಇಸವಿಯಲ್ಲಿ ಇದು **ಸ್ವಲ್ಪ** ಇಂಪ್ರೂವ್ **ಆಗಿದೆ.** ಪಿಗ್ ಐರನ್ 500 ಟನ್ ಫೆರೂ ಸಿಲಿಕಾನ್ 300 ಟನ್ ಕಾಸ್ಟಿಂಗ್ ಐರನ್ 20 ಟನ್ ಸ್ಟೀನ್ ಪೈಪ್ಸ್ 100 ಟನ್ಸ್, ಸಿಮೆಂಟ್ ಇಲ್ಲ, ಈ ರೀತಿಯಾಗಿದೆ. ಇದೆಲ್ಲಾ ಪ್ರೊಡಕ್ಷನ್ ಆಗುತ್ತಾ ಇರಬೇಕು. ಮಾರ್ಕೆಟ್ ಇಲ್ಲ ಎಂದು ನಾವು ಇದನ್ನು ತಯಾರು ಮಾಡುವುದನ್ನು ನಿಲ್ಲಿಸಿಬಿಡುವುದಕ್ಕಾಗುವುದಿಲ್ಲ. ಇದು ಕಂಟಿನ್ಯೂಯಸ್ ಪ್ರೊಸೆಸ್. ಒಂದೊಂದು ಸಂದರ್ಭದಲ್ಲಿ ಇದು ಹೆಚ್ಚಾಗಿ ಖರ್ಚಾಗುತ್ತದೆ, ಇನ್ನೊಂದು ಸಂದರ್ಭದಲ್ಲಿ ಹಾಗೆಯೇ ಉಳಿಯುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಈ ಪದಾರ್ಥಗಳನ್ನು ತಯಾರು ಮಾಡತಕ್ಕದ್ದನ್ನು ನಿಲ್ಲಿಸಿದರೆ ತೊಂದರೆಯಾಗುತ್ತದೆ ಎಂದು ಹೇಳಿದಿರಿ. ಅನಾವಶ್ಯಕವಾಗಿ, ಖರ್ಚಾಗದೆ ಇರತಕ್ಕ ಸಾಮಾನುಗಳನ್ನು ತಯಾರುಮಾಡಿ ಕಂಪನಿಯ ಹಿತಕ್ಕೆ ಧಕ್ಕೆ ಬರತಕ್ಕ ರೀತಿಯಲ್ಲಿ ಮಾಡುವುದಾದರೆ ಅಲ್ಲಿಯ ಕೆಲಸಗಾರರಿಗೆ ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎನ್ನುವಂಥ ತೊಂದರೆಯು ಬರುತ್ತದೆಂದು ನಾನು ತಿಳಿದಿದ್ದೇನೆ. ಇನ್ನು ಮುಂದಾದರೂ ಕೂಡ ಯಾವ ಯಾವ ಪದಾರ್ಥಗಳನ್ನು ಯಾವ ಕಾಲದಲ್ಲಿ ತಯಾರು ಮಾಡಬೇಕು ಎನ್ನುವುದನ್ನು ಸರ್ಕಾರ ನಿರ್ದೇಶನ ಕೊಟ್ಟು ಕಂಪನಿಯ ಮತ್ತು ಕೆಲಸಗಾರರ ಹಿತಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅಲ್ಪಸ್ವಲ್ಪವಾಗಿ **ಎಲ್ಲರ** ಹಿತಕ್ಕೆ ಧಕ್ಕೆ ಸಂದರ್ಭಕ್ಕನುಸಾರವಾಗಿ ಬಂದರೆ ನಾವು ಸುಮ್ಮನಿರಬೇಕು ಎಂದಲ್ಲ. ಅಲ್ಲಿ ಪ್ರೊಡಕ್ಷನ್ ಮ್ಯಾನೇಜರ್ ಇರುತ್ತಾರೆ ಮಾರ್ಕೆಟಿಂಗ್ **ಆಫೀಸರ್** ಇರುತ್ತಾರೆ ಪ್ಲಾನಿಂಗ್ ನವರು ಇರುತ್ತಾರೆ, ಇದನ್ನೆಲ್ಲಾ ನಮ್ಮ ಪ್ಲಾನಿಂಗ್ ಪ್ರೋಗ್ರಾಂ ಪ್ರಕಾರ ಹಾಕಿದರೂ ಸಹ ಒಂದೊಂದು ಸಾರಿ ಹೀಗೆ ಆಗುತ್ತದೆ. ತಾವು ಹೇಳುವಂಥ **ಪರಿಸ್ಥಿತಿ** ಅಲ್ಲಿಲ್ಲ.